ತುಳುಸಂಧಿಯ ಕತೆ:—೩೨.

ಮುಸುಕಿದ ವಂಶಜ್ಯೋತಿಯ ಪುನರುತ್ಥಾನ!

ಪರಶುರಾಮ ಕಟ್ಟಿ! ಪರಶುರಾಮ ತಿಟ್ಟಿ! ಅರಳೀಮರ! ಬೆಳ್ಳಿಯ ಉಯ್ಯಾಲೆ! ಅರಳೀಮರದ ಬುಡದಲ್ಲಿ ಬೆಳ್ಳಿಯ ಉಯ್ಯಾಲೆಯಲ್ಲಿ ಉದ್ಭವವಾಗಿ ಕಾಣಿಸಿಕೊಂಡವಳು ಸತ್ಯಪುತ್ರಿ ಬನ್ನಾರೆ ಬನ್ನಾರು!

ಉಯ್ಯಾಲೆಯಲ್ಲಿ ಕೂತು ರಾಮಾಯಣದ ಶ್ಲೋಕವನ್ನು ಹಾಡುತ್ತಾ ಇದ್ದಳು.

ಹಾಗಿರುವಾಗ ಬನ್ನಾರೆ ಬನ್ನಾರು ಒಂದು ದಿನ ಈ ರೀತಿ ತನ್ನಲ್ಲಿ ಆಲೋಚಿಸಿದಳು:

"ನಾನು ಮರದ ಬುಡದಲ್ಲಿ ಉದ್ಭವವಾದೆನು. ನನಗೆ ತಂಗುವುದಕ್ಕೆ ಒಂದು ಮನೆ ಬೇಡವೇ?"

ತನ್ನ ಸತ್ಯದ ಬಲದಿಂದ ಒಂದು ಭವ್ಯವಾದ ಅರಮನೆಯನ್ನು ನಿರ್ಮಿಸಿಕೊಂಡಳು!

ಅರಮನೆಯಲ್ಲಿ ಒಕ್ಕಲಾಗಿ ನೆಲೆಸಿದಾಗ ಅವಳಿಗೆ ಮತ್ತೊಂದು ಯೋಚನೆಯಾಯಿತು:

"ಒಂದು ಅರಮನೆಯಲ್ಲಿ ಏಕಾಕಿನಿಯಾಗಿ ಹೇಗೆ ನಾನು ಇದ್ದುಕೊಳ್ಳಲಿ? ನನ್ನ ಕೆಲಸಕಾರ್ಯಗಳನ್ನು ಮಾಡಲಿಕ್ಕೆ ಒಬ್ಬ ಆಳು ಬೇಕಲ್ಲವೇ?"

ಒಬ್ಬ "ಮೂಲದ ಮಾಣಿ" (ಉಂಡಾಳು)ಯನ್ನು ಉಂಟುಮಾಡಿದಳು. ಆ ಮೇಲೆ ಅರಮನೆಯಲ್ಲಿ ಆಕೆಯೂ, ಮೂಲದ ಮಾಣಿಯೂ ಇದ್ದುಕೊಂಡರು.

ದಿನದಿಂದ ದಿನ, ವಾರದಿಂದ ವಾರ ದಾಟಿತು. ಒಂದು ದಿನ ಬನ್ನಾರೆಬನ್ನಾರು ಮೂಲದ ಮಾಣಿಗೆ ಈ ರೀತಿ ನುಡಿದಳು:

"ನಾವು ಉದ್ಯೋಗವಿಹೀನರಾಗಿ ಖಾಲಿ ಕೂತರೆ ನಮ್ಮ ಹೊಟ್ಟೆಯ ಗತಿಯೇನು? ನಮಗೆ ಕಸಬೊಂದು ಬೇಕಲ್ಲವೇ?"

ಎರಡು ಎತ್ತುಗಳನ್ನು ಉತ್ಪನ್ನ ಮಾಡಿದಳು!

"ನೀನು ಬಂಜರು ಗುಡ್ಡೆಯನ್ನು ಉಳಬೇಕು" ಎಂಬುದಾಗಿ ಮೂಲದ ಮಾಣಿಗೆ ಹೇಳಿದಳು.!

ಮೂಲದ ಮಾಣಿ ಕೈಯಿಂದ ಎತ್ತುಗಳನ್ನು ನೇಗಿಲಿಗೆ ಹೂಡಿಸಿ ಬಂಜರು ಗುಡ್ಡೆಯನ್ನು ಉತ್ತನೆಮಾಡಿಸಿದಳು. ಮುತ್ತು ರತ್ನ ಬಿತ್ತಿಸಿದಳು.

ದಿನದಿಂದ ದಿನ, ವಾರದಿಂದ ವಾರ ಕಳೆಯಿತು. ಪಯಿರು ಮಾಗಿತು. ಮುತ್ತು ರತ್ನಗಳನ್ನು ಕೊಯ್ಸಿದಳು. ಅರಮನೆ ಭಾರೀ ಸಂಪತ್ತಿ ಸೌಭಾಗ್ಯಗಳಿಂದ ತುಂಬಿ ತುಳುಕಾಡಿತು!

ಬನ್ನಾರೆ ಬನ್ನಾರಳ ಸೌಂದರ್ಯ, ಸೌಜನ್ಯತೆಗಳ ಪ್ರಭಾವ ತೇಜಸ್ಸು ನಾಲ್ಕು ದಿಕ್ಕಿಗೂ ದಳ್ಳಿಸಿತು. ಅದರಿಂದುಂಟಾದ ಅಗ್ನಿಜ್ವಾಲೆಯಿಂದ ನರರು ದಹಿಸಿ ದಾವತಿಗೊಳ್ಳುವಂತಾದರು. ಸೈರಿಸಲಶಮರ್ಥರಾದ ಮಾನವರು ನಾರಾಯಣ ದೇವರ ಸನ್ನಿಧಿಗೆ ದೂರನ್ನು ಒಯ್ದುಕೊಂಡು ಹೋದರು.

"ಭೂಲೋಕದಲ್ಲಿ ನಮಗೆ ಅಸಹನೀಯವಾದ ಕಷ್ಟ ಉಂಟಾಗಿದೆ. ಅಗ್ನಿಜ್ವಾಲೆಯಿಂದ ನಮಗೆ ಒಂದು ಕ್ಷಣವೂ ತಡೆದು ನಿಲ್ಲುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ಕೆಳಗೆ ಭೂಲೋಕದಲ್ಲಿ ಏನು ಸಂಗತಿ, ಏನು ಸಂಕಷ್ಟ ತಟ್ಟಿದೆ, ಜನರು ಹೇಗಿದ್ದಾರೆ—ಎನ್ನುವ ಯಾವುದೇ ಗೊಡವೆಯನ್ನು ನೀವು ಹಚ್ಚಿಕೊಂಡಂತಿಲ್ಲವಲ್ಲಾ?" ಎಂಬುದಾಗಿ ನಾರಾಯಣ ದೇವರ ಸಿರಿಪಾದಕ್ಕೆ ಅಡ್ಡಬಿದ್ದು ಆವೇದನೆ ಮಾಡಿಕೊಂಡರು.

"ನಾನು ನೋಡುತ್ತೇನೆ. ನಿಮಗೆ ಸುಖವಾಗುತ್ತದೆ. ನೀವೀಗ ಹೋಗಿರಿ" ಎಂದು ನಾರಾಯಣ ದೇವರು ಅಭಯವನ್ನಿತ್ತರು. ದುಃಖಾರ್ತರಾಗಿ ಬಂದ ಮಂದಿಗಳನ್ನು ಕಳುಹಿಸಿಕೊಟ್ಟನು.

ಬಳಿಕ ನಾರಾಯಣ ದೇವನು ತನ್ನ ಜ್ಞಾನಚಕ್ಷುವಿನಿಂದ ಒಂದು ಕ್ಷಣ ನೀಟಿಸಿ ಪರ್ಯೋಷಣೆಮಾಡಿದನು.

"ಬನ್ನಾರೆ ಬನ್ನಾರು ಓರ್ವ ಅನನ್ಯ ಅಸಾಧಾರಣಳಾದ ಸತ್ ಶೀಲವಂತ ಕನ್ಯೆ. ಇಂತಹ ಸದಾಚಾರಿಣಿ ಇದ್ದರೆ ಅವಳ ಪ್ರಖರ ತೇಜಸ್ಸಿನ ಪ್ರಭಾವದಿಂದಾಗಿ ಒಂದು ನರಹುಳ ಕೂಡಾ ಭೂಲೋಕದಲ್ಲಿ ಬದುಕಿ ಪಾರಾಗಿಕೊಳ್ಳಲಾರದು" ಎಂದು ಪರಾಮರಿಸಿದನು.

ನಾರಾಯಣ ದೇವನು ನಟ್ಟಿರುಳಲ್ಲಿ ಜಾವದ ಹೊತ್ತಿನಲ್ಲಿ ಹೊರಟನು. ಮಾಯದಲ್ಲಿ ಭೂಲೋಕಕ್ಕೆ ಇಳಿದನು. ಬನ್ನಾರೆ ಬನ್ನಾರು ತನ್ನ ಅರಮನೆಯ ಶಯ್ಯಾಗಾರದಲ್ಲಿ ಮಣಿರತ್ನಖಚಿತ ಮಂಚದಲ್ಲಿ ಹೂವಿನ ಹಾಸಿಗೆಯ ಮೇಲೆ ಪಟ್ಟೆಯ ತಲೆದಿಂಬಿಗೆ ಒರಗಿ [illegible] ನಿದ್ರೆಯಲ್ಲಿ ಪರವಶಳಾಗಿದ್ದಳು. ನಾರಾಯಣ ದೇವನು ಅವಳ ಶಯನಾಗಾರದಲ್ಲಿ ನಿಜರೂಪ ನಿಜರಂಗ ತೋರಿದನು.

"ಈ ಸದಾಚಾರಿಣಿ ಕನ್ನಿಕೆಯ ಶೀಲಹರಣವನ್ನು ಮಾಡಬೇಕು" ಎಂದು ನಾರಾಯಣದೇವನು ಮನವಿಕ್ಕಿದನು. ಬನ್ನಾರೆ ಬನ್ನಾರಳ ಕಾಲು ಹಾಯ್ದು ಅವಳ ಶೀಲಗೆಡಿಸಿ ಹೋಗಿಬಿಟ್ಟನು; ಮಾಯವಾಗಿ ದಿವ್ಯಲೋಕವನ್ನು ಸೇರಿದನು.

ದಿನಗಳು ದಾಟಿದವು, ವಾರಗಳು ಕಳೆದವು. ಒಂದು ತಿಂಗಳು ನಲ್ವತ್ತು ದಿವಸಗಳಾದಾಗ ಬನ್ನಾರೆ ಬನ್ನಾರಳ ಗರ್ಭ ಬಲಿಯಿತು; ಅವಳು ಗರ್ಭವತಿಯಾದಳು.

ಹೀಗಿರುತ್ತ ಗರ್ಭಕ್ಕೆ ನವಮಾಸ ತುಂಬಿ, ಒಂಭತ್ತು ದಿವಸ ಒಂಭತ್ತು ಘಳಿಗೆಯಾಗುವಾಗ, ಬನ್ನಾರೆ ಬನ್ನಾರಳಿಗೆ ಹೊಟ್ಟೆಯಲ್ಲಿ ಬೇನೆ ಗೋಚರಿಸಿತು, ಮೂಲದ ಮಾಣಿಯನ್ನು ಕರೆದು ಆವನಿಗೆ ಹೀಗೆ ಹೇಳಿದಳು:

"ಮಾಣಿಯೇ, ನನಗೆ ಹೊಟ್ಟೆಯ ವೇದನೆಯಿಂದ ಏನೂ ಕೂಡವುದಿಲ್ಲ ನೀನು ಊರಿಗೆ ಗೊತ್ತುಮಾಡಬೇಡ. ನನ್ನ ಸಂಕಷ್ಟ ನೋಡಿ ನೀನೇನೂ ಗಾಬರಿಗೊಳ್ಳುವುದು ಬೇಡ."

"ಅಕ್ಕನವರೇ, ನೀವು ನಾರಾಯಣ ದೇವರ ಸ್ಮರಣೆ ತೆಗೆಯಿರಿ; ನಿಮ್ಮ ಬೇನೆ ಸಂಕಷ್ಟವೆಲ್ಲ ಅದರಷ್ಟಕ್ಕೇ ಪರಿಹಾರವಾಗುವವು" ಎಂದು ಮೂಲದ ಮಾಣಿ ಸೂಚಿಸಿದನು.

"ನಾನು ಆ ದುರುಳ ದುಷ್ಟನನ್ನು ಸ್ಮರಿಸಲಾರೆ, ಅವನ ಕಡೆ ಅಂಗಲಾಚಲಿಕ್ಕಿಲ್ಲ."

ಎಂದಂತೇ ಬನ್ನಾರೆ ಬನ್ನಾರು ಪ್ರಥಮತಃ ನಾರಾಯಣ ದೇವನ ಸ್ಮರಣೆ ಮಾಡುವುದಿಲ್ಲ. ಬೇನೆ ಉಲ್ಬಣಾವಸ್ಥೆಗೇರಿ ಜೀವಕ್ಕೆ ಸುತ್ತುಬಂದಾಗಂತೂ ತೀರಾ ಭಯವಿಹ್ವಲಳಾಗಿಬಿಟ್ಟಳು. ನಿರುಪಾಯಳಾಗಿ ನಾರಾಯಣ ದೇವನನ್ನು ಮನಸಾ ನೆನವರಿಸಿದಳು. "ನಾರಾಯಣ ದೇವರೇ! ನಾರಾಯಣ ದೇವರೇ!" ಎಂದು ಒರಲ್ದಳು. ತಕ್ಷಣ ಅವಳಿಗೆ ಪ್ರಸವವಾಯಿತು. ಒಂದು ಹೊಟ್ಟೆಗೆ ಒಂದಾವರ್ತಿಗೆ ಎರಡು ಗಂಡು, ಎರಡು ಹೆಣ್ಣು—ಹೀಗೆ ಕ್ರಮವಾಗಿ ನಾಲ್ಕು ಶಿಶುಗಳು ಜನನವಾಗಿ ಭೂಮಿಗೆ ಬಿದ್ದವು.

ಮೂಲದ ಮಾಣಿಯನ್ನು ಕರೆದು ಆವನಿಗೆ ತಾಕೀತುಕೊಟ್ಟಳು:

"ಮೂಲದ ಮಾಣೀ, ಮಕ್ಕಳು ಜನನವಾದ ಸುದ್ದಿಯನ್ನು ಊರಿನವರಿಗೆ ಉಸುರಬೇಡ."

ಬಾಣಂತಿಯಾದ ಬನ್ನಾರೆ ಬನ್ನಾರು ನಲ್ವತ್ತನೇ ದಿನದಲ್ಲಿ ಮಿಂದು ಶುಚಿರ್ಭೂತೆಯಾದಳು. ಬಾವಮುಟ್ಟುವ ಸಂಸ್ಕಾರ ವಿಧಿಯನ್ನು ನೆರವೇರಿಸಿದಳು.

ಮರುದಿನ ಬನ್ನಾರೆ ಬನ್ನಾರು ಮಕ್ಕಳು ಹೊಲಸುಮಾಡಿದ ಚಿಂದಿ ಕಪ್ಪಡಗಳನ್ನು ಕೆರೆಗೆ ಒಯ್ದು ಒಗೆದುತರುವುದಕ್ಕೆ ಅವನ್ನೆಲ್ಲ ಬುಟ್ಟಿಯಲ್ಲಿ ತುಂಬಿಸಿ ಹೊರಡುವುದಕ್ಕೆ ಸಿದ್ಧಳಾದಳು. ಆ ವೇಳೆಯಲ್ಲಿ ಮೂಲದ ಮಾಣಿಯನ್ನು ಕರೆದು ಆವನಿಗೆ ಈ ರೀತಿ ನುಡಿದಳು:

"ನನ್ನ ಮಕ್ಕಳಿಗೆ ಹೆಸರಿಡಲಿಲ್ಲ, ತುರಪಿಟ್ಟು ಕರೆಯಲಿಲ್ಲ. ಹಿರಿಯ ಮಗನನ್ನು ರಾಜಭಾರಿ ಪಡ್ಡೆಲ, ಕಿರಿಯವನನ್ನು ದೇಶಭಾರಿ ಪಡ್ಡೆಲ, ಅವರ ತಂಗಿಯಂದಿರಲ್ಲಿ ದೊಡ್ಡವಳನ್ನು ಕಂಪು ಪೋಲೆದಿ, ಸಣ್ಣವಳನ್ನು ತಂಗಡಿ ತಟ್ಟುಗ ಎಂಬುದಾಗಿ ಕರೆಯತಕ್ಕದು. ಮಕ್ಕಳನ್ನು ನೀನು ಜೋಕೆಯಿಂದ ನೋಡಿ ಕೊಂಡಾಡುತ್ತ ಸಲಹು. ಅವರ ಬುದ್ಧಿ ಮತಿ ಬೆಳೆದು ಮುಂದಕ್ಕೆ ಅವರು ಪ್ರಾಯಸಮರ್ಥರಾಗುವಾಗ, ಕಟ್ಟೆಯಲ್ಲಿರುವ ನನ್ನ ರಾಜಭಾರಿ ಬೀಡನ್ನು ರಾಜಭಾರಿ ಪಡ್ಡೆಲನಿಗೂ, ತಿಟ್ಟೆಯಲ್ಲಿರುವ ನನ್ನ ದೇಶಭಾರಿ ಬೀಡನ್ನು ದೇಶಭಾರಿ ಪಡ್ಡೆಲನಿಗೂ ಒಪ್ಪಿಸಿಕೊಡು. ಆ ಮೇಲೆ ನೀನು ನನ್ನ ಬೆನ್ನ ಸಹಾಯಕ್ಕೆ ಬಾ. ನಾನೀಗ ಕೆರೆಗೆ ಬಟ್ಟೆ ಒಗೆಯುವುದಕ್ಕೆ ಹೋಗುತ್ತೇನೆ."

ಬನ್ನಾರೆ ಬನ್ನಾರು ಅರಿವೆ ತುಂಬಿಸಿಟ್ಟ ಬುಟ್ಟಿಯನ್ನು ತನ್ನ ಕಂಕುಳಿಗೆ ಅವಚಿಕೊಂಡು ಕೆರೆಗೆ ನಡೆದಳು. ಬಟ್ಟೆ ಒಗೆಯುತ್ತಿದ್ದಾಗ ಕೆಂಡೆಂಗಿನ ಮುದದ ಸೋಗೆಯೊಂದು ಇದ್ದಕಿದ್ದ ಹಾಗೇ ಮೇಲಿಂದ ಬನ್ನಾರೆ ಬನ್ನಾರಳ ತಲೆಗೆ ದೊಪ್ಪನೇ ಬಿತ್ತು! ಬನ್ನಾರೆ ಬನ್ನಾರು ನಿಂತಲ್ಲೇ ಉರುಳಿ ಕೆರೆಯೊಳಗೆ ಬಿದ್ದು ಕಂತಿಹೋದಳು.

ಇತ್ತ ಕೂಸುಗಳು ಒಂದೇ ಸವನೆ ದೊಡ್ಡ ಧ್ವನಿಮಾಡಿ ಚೀರುತ್ತ ಸಿಗಡಿ ಪಟಪಟನೇ ಬಡಬಡಿದುಕೊಳ್ಳುವ ಹಾಗೆ ರಂಪಾಟವೆಸಗಿದವು. ಅದನ್ನು ನೋಡಿ ಮೂಲದ ಮಾಣಿ "ಬಹಳ ಹೊತ್ತಾದರೂ ಬನ್ನಾರೆ ಬನ್ನಾರು ಹಿಂತಿರುಗಲಿಲ್ಲವಲ್ಲಾ!" ಎಂದು ಬೇಸತ್ತು ಬೆರಗಿ ಉದ್ಗಾರವನ್ನು ತೆಗೆದನು. ಹುಡುಕುತ್ತ ಕೆರೆಯ ಕಡೆಗೆ ಸಾಗಿದನು. ಅಲ್ಲಿ ನೀರಿನ ಮೇಲೆ ಬನ್ನಾರೆ ಬನ್ನಾರಳ ಕಳೇಬರವು ತೇಲಾಡುತ್ತಿರುವ ಹೃದಯಭೇದಕ ದೃಶ್ಯವು ಅವನ ದೃಷ್ಟಿಗೆ ಗೋಚರಿಸಿತು!

ಮೂಲದ ಮಾಣಿ ತಲೆತಲೆ ಬಡಿದುಕೊಂಡನು, ಮನಕಣಿಯೇ ರೋದಿಸಿದನು. ಒಡತಿಯ ಹೆಣವನ್ನು ಅರಮನೆಯ ಚಾವಡಿಗೆ ಒಯ್ದನು. ಊರಿನ ಜನರು ಕೂಡಿದರು. ಆಚೆ ಕರೆ ಮಾಮರ, ಈಚೆ ಕರೆ ಪನಸನ ಮರ ಕಡಿದರು. ಅಶನದ ಕೋಡಿಯಲ್ಲಿ ಮಸಣದ ಕಾಷ್ಠವನ್ನು ಊತರು. ಬನ್ನಾರೆ ಬನ್ನಾರಳ ಶವವನ್ನು ಒಯ್ದು ಕಾಷ್ಠದ ಮೇಲಿಟ್ಟು ಬೆಂಕಿಕೊಟ್ಟರು. ಭೂಮಿಗೆ ಭಸ್ಮ, ಆಕಾಶಕ್ಕೆ ಧೂಮವನ್ನು ಹಸರಿಸಿದರು.

೧ ೦ ೦ ೦

ಮೂಲದ ಮಾಣಿ ಮಕ್ಕಳನ್ನು ಅತೀವ ಕೊಂಡಾಟದಿಂದ ಲಾಲನೆಪಾಲನೆ ಮಾಡುತ್ತ ಬೀಡನ್ನಾಳಿಕೊಂಡಿದ್ದನು.

ಕಾಲ ಉರುಳಿದಂತೇ ಮಕ್ಕಳು ಬೆಳೆದು ದೊಡ್ಡವರಾದರು. ಹದಿನಾರು ವರ್ಷಗಳಾದಾಗ ಮಕ್ಕಳಿಗೆ ಹೇಳಿದನು:

"ಮಕ್ಕಳೇ, ನೀವು ಸಣ್ಣವರು ಹೋಗಿ ದೊಡ್ಡವರಾದಿರಿ. ಬುದ್ಧಿಬಲಭರಿತರಾದಿರಿ. ರಾಜಭಾರಿ ಪಡ್ಡೆಲ ತನ್ನ ಸಹಜಾತೆಯಾದ—ಕಂಪು ಪೋಲೆದಿಯೊಡನೆ ರಾಜಭಾರಿ ಬೀಡಿನಲ್ಲಿ ನೆಲೆಯೂರಿ ಆಕೆಯ ರಕ್ಷಣ್ಯಮಾಡಬೇಕು. ದೇಶಭಾರಿ ಪಡ್ಡೆಲ ಕಿರಿಯ ತಂಗಿಯಾದ ತಂಗಡಿ ತಟ್ಟುಗಳನ್ನು ಕೂಡಿಕೊಂಡು ದೇಶಭಾರಿ ಬೀಡನ್ನು ಸೇರಿ, ಅವಳನ್ನು ಪರಿಪಾಲಿಸಿಕೊಂಡಿರತಕ್ಕದು. ಮಹಾತಾಯಿ ಬನ್ನಾರೆ ಬನ್ನಾರು ಈ ರೀತಿ ವ್ಯವಸ್ಥಾಪಿಸುವಂತೆ ನನಗೆ ವಿಧಿಸಿ ಹೋಗಿದ್ದರು. ಇಷ್ಟರ ತನಕ ನಾನು ನಿಮ್ಮ ಸಂರಕ್ಷಣೆ ಮಾಡುವುದರ ಸಲುವಾಗಿ ತಡೆಕೊಂಡು ನಿಂತೆನು. ನಿಮ್ಮನ್ನು ಅಗಲಿ ಹೊರಟುಹೋಗುವ ಕಾಲವಿದೀಗ ನನಗೆ ಸನ್ನಿಹಿತವಾಗಿದೆ. ನೀವು ನೆನೆದಲ್ಲಿ ನಾನು ಇದ್ದೇನೆ."

ಮರುಕ್ಷಣದಲ್ಲಿ ಮೂಲದ ಮಾಣಿ ಮಾಯವಾಗಿ ಬಿಟ್ಟನು!

ತರುವಾಯ ರಾಜಭಾರಿ ಪಡ್ಡೆಲ ಕಂಪು ಪೋಲೆದಿಯೊಡಗೂಡಿ ರಾಜಭಾರಿ ಬೀಡಿನಲ್ಲಿ ನಿಂತನು. ದೇಶಭಾರಿ ಪಡ್ಡೆಲ ತಂಗಡಿ ತಟ್ಟುಗಳನ್ನು ಕರೆದೊಯ್ದು ದೇಶಭಾರಿ ಬೀಡಿನಲ್ಲಿ ತಳವೂರಿದನು.

ಕಂಪು ಪೋಲೆದಿಗೆ ವರನೊಬ್ಬನು ಬಂದನು. ಇನ್ನೋಡು ಬೀಡಿನ ದೊರೆ

ರಾಜಭಾರಿ ಬೀಡಿಗೆ ಕನ್ಯಾಶೋಧಕ್ಕೆ ಆಗಮಿಸಿದನು.

"ನನ್ನ ತಂಗಿ ಮಾನಿಪೋಲೆದಿಯನ್ನು ನೀನು ವಿವಾಹವಾದರೆ ನಿನ್ನ ತಂಗಿಯನ್ನು ನಾನು ಮದುವೆಯಾಗುತ್ತೇನೆ" ಎಂದು ಇನ್ನೋಡಿನ ದೊರೆ ರಾಜಭಾರಿ ಪಡ್ಡೆಲನಿಗೊಂದು ಶರತ್ತನ್ನೊಡ್ಡಿದನು.

ಇಕ್ಕಡೆಯವರೂ ಆ ಶರತ್ತಿಗೆ ಒಪ್ಪಿದರು. ನೆಂಟಸ್ತಿಕೆಗಳು ನಿಜವಾದವು. ಮದುವೆಗೆ ದಿನ ನಿಶ್ಚಯಮಾಡಿದರು. ಗುರುವಾರ ದಿನ ದಿಬ್ಬಣ ತರಬೇಕೆಂದು ಇನ್ನೋಡಿನ ದೊರೆಗೆ ಸೂಚಿಸಿಯಾಯಿತು.

ಆ ಪ್ರಕಾರ ಗುರುವಾರ ದಿನದಂದು ಇನ್ನೋಡಿನ ದೊರೆ ರಾಜಭಾರಿ ಬೀಡಿಗೆ ದಿಬ್ಬಣ ತಂದನು. ಭವ್ಯವಾಗಿ ಕಟ್ಟಿದ ಒಂದು ಮಂಟಪದಲ್ಲಿ ಅನುಕ್ರಮವಾಗಿ ಇನ್ನೋಡಿನ ದೊರೆ ಮತ್ತು ಕಂಪು ಪೋಲೆದಿ ಅವರಿಗೂ, ರಾಜಭಾರಿ ಪಡ್ಡೆಲ ಮತ್ತು ಮಾನಿಪೋಲೆದಿ ಇವರಿಗೂ ವಿಜೃಂಭಣೆಯಿಂದ ವಿವಾಹೋತ್ಸವ ಜರಗಿತು. ಧಾರೆಯಾದ ಮೇಲೆ ಭೂರಿ ಭೋಜನವಾಯಿತು. ದಿಬ್ಬಣ ಹಿಂತಿರುಗಿತು.

೦ ೦ ೦ ೦

ಹೀಗೇ ಒಂದು ವರುಷ ಉರುಳಿತು. ಮದುವೆಯಾಗಿ ಹೋದ ಕಂಪು ಪೋಲೆದಿ ತನ್ನ ಗಂಡ—ಇನ್ನೋಡಿನ ದೊರೆ—ಅವನ ಇನ್ನೋಡಿನ ಬೀಡಿನಲ್ಲಿದ್ದಳು. ಮಾನಿಪೋಲೆದಿ ಪತಿಯಾದ ರಾಜಭಾರಿ ಪಡ್ಡೆಲನ ರಾಜಭಾರಿ ಬೀಡಿನಲ್ಲಿದ್ದಳು.

ಮಾನಿಮಂಗರದಲ್ಲಿ ಮಾನಿಮಂಗರದರಸನೆಂಬವನಿದ್ದನು. ಅವನು ರಾಜಭಾರಿ ಪಡ್ಡೆಲನಿಗೆ ತನ್ನನ್ನು ತುರ್ತ ಬಂದು ಕಾಣಬೇಕೆಂಬುದಾಗಿ ಒಂದು ಓಲೆ ಬರೆದು ಕಳುಹಿಸಿದನು. ರಾಜಭಾರಿ ಪಡ್ಡೆಲ ಕೂಡಲೇ ಮಾಣಿಮಂಗರದ ಅರಮನೆಗೆ ತೆರಳಿದನು.

ಮಾನಿಮಂಗರದರಸ ಬಲಿಷ್ಠನಾದ ತುಳುವ ಅಳರಸನಾಗಿದ್ದನು. ಕಠೋರ ಶಾಸಕನಾಗಿದ್ದನು. ಚಿಟ್ಟೆ ಕಾರ್ಯದ ಸಲುವಾಗಿ ರಾಜಭಾರಿ ಪಡ್ಡೆಲನನ್ನು ಕರೆದಿದ್ದನು. ರಾಜಪಡ್ಡೆಲ ಮಂಗರದರಮನೆಯ ಅತಿಥಿಗೃಹದಲ್ಲಿ ಉಳಕೊಂಡನು. ನಾಲ್ಕು ದಿವಸವೂ ಅನ್ನನೀರಿಲ್ಲದೆ ಪಡ್ಡೆಲ ಹೇಗೂ ನಿಂತನು. ಕೊನೆಗಂತೂ ಹಸಿವೆ ತೃಷೆಗಳನ್ನು ತಾಳಲಾರದೆ ಕೆಂಗೆಟ್ಟು, ಸೋದರಿ ತಂಗಡಿ ತಟ್ಟುಗಳಿರುವ ದೇಶಭಾರಿ ಬೀಡಿಗೆ ಆಳನೊಬ್ಬನನ್ನು ಬಿಟ್ಟನು.

ದೇಶಭಾರಿ ಬೀಡಿಗೆ ಬಂದ ಆಳು ತಂಗಡಿ ತಟ್ಟುಗಳಿಗೆ ಈ ರೀತಿ ತಿಳಿಸಿದನು:

"ರಾಜಭಾರಿ ಪಡ್ಡೆಲರು ಮಾನಿಮಂಗರದ ಅರಮನೆಗೆ ಹೋದವರು ಹಸಿವು ನೀರಡಿಕೆಯಿಂದ ತುಂಬಾ ತಾಪಪಟ್ಟುಕೊಂಡಿದ್ದಾರೆ. ಊಟದ ಬುತ್ತಿಯೊಂದನ್ನು ತಮ್ಮ ಕೈಯಿಂದ ತಯಾರಿಸಿ ಬೇಗನೇ ತಾ ಎಂದು ಹೇಳಿ ನನ್ನನ್ನು ಇಲ್ಲಿಗೆ ಅಟ್ಟಿದರು."

ಅದನ್ನು ಕೇಳಿ ತಂಗಡಿ ತಟ್ಟುಗ ಒಳಗೆ ನಡೆದು ಕಲ್ಲಕಲಂಬಿಯ ಬಾಯಿಮುಚ್ಚಳ ತೆರೆದಳು. ಅರುವತ್ತು ತೂಕ ಬಂಗಾರು ಮೂವತ್ತು ತೂಕ ಬೆಳ್ಳಿ ಎತ್ತಿಕೊಂಡಳು. ಅಲ್ಲಿಂದ ಚೀಂಕ್ರೊಜಿ ಪಾನೊರಿ ಆಚಾರಿ ಬಳಿಗೆ ತೆರಳಿ ಅವನಿಗೆ, "ಮುಕ್ಕಾಲುಮೂರು ಘಳಿಗೆಯಲ್ಲಿ ಕೊಳಕೆ ಸರಿಗೆ ಮಾಡಿಕೊಡು" ಎಂದು ಹೇಳಿದಳು.

ಆಚಾರಿ ಬೆಳ್ಳಿ ಬಂಗಾರಗಳನ್ನು ಒಂದಾವರ್ತಿ ತೂಕಮಾಡಿ ತೆಕ್ಕೊಂಡನು. ಬಳಿಕ ಗಟ್ಟಕ್ಕೆ ಉಳಿ, ಸಮುದ್ರಕ್ಕೆ ತಿದಿ ಇಟ್ಟನು. ಸಾವಿರ ಕೊಳಕೆ ಸಾವಿರದೊಂದು ಸರಿಗೆ ಮಾಡಿಕೊಟ್ಟನು. ತಂಗಡಿ ತಟ್ಟುಗ ಆಚಾರಿಯ ಕೂಲಿ ತೆತ್ತಳು. ಬಳಿಕ ಕೊಳಕೆ ಸರಿಗೆ ತೆಕ್ಕೊಂಡು ಬೀಡಿಗೆ ಹಿಂದಿರುಗಿದಳು.

ಬೀಡಿಗೆ ಮರಳಿದವಳು ಹುಣಸೆ ಸಪ್ಪನ್ನು ತಂದು, ಅದನ್ನು ಕೊಳಕೆ ಸರಿಗೆಯ ಎಡೆಗೆಡೆಗೆ ಓಣವಾಗಿ ತುರುಕಿಸಿದಳು. ಒಳಗೆ ಅನ್ನವನ್ನು ಸುರಿದು ಬುತ್ತಿಯನ್ನು ಸಂವರಿಸಿಟ್ಟಳು. ಅವಳು ಕ್ಷಣಕಾಲ ಏಕಾಗ್ರಚಿತ್ತಳಾಗಿ ಇಷ್ಟದೈವವನ್ನು ನೆನೆದುಕೊಂಡು ಹೀಗೆ ಉಚ್ಚರಿಸಿದಳು:

"ನನ್ನ ಅಣ್ಣ ರಾಜಭಾರಿ ಪಡ್ಡೆಲ ಈ ಬುತ್ತಿಯ ಒಂದು ಕೊಳಕೆಯನ್ನು ತೆಗೆಯುವಾಗ ಅವರಿಗೆ ಸಾವಿರ ಕೊಳಕೆ ಕಳಚಿಕೊಳ್ಳಬೇಕು. ಅನ್ಯರು ತೆಗೆದರೆ ಅದರಲ್ಲಿ ಸಾವಿರ ಕೊಳಕೆ ಸಿಕ್ಕೊಳ್ಳಬೇಕು."

ಬುತ್ತಿಯನ್ನು ಆಳಿನ ಕೈಗೆಕೊಟ್ಟಳು. ಆಳು ಅದನ್ನು ಹಿಡಿದುಕೊಂಡು ಮಾನಿಮಂಗರಕ್ಕೆ ಸಾಗಿದನು

ಆಳು ಅತಿಥಿಗೃಹವನ್ನು ಪ್ರವೇಶಿಸಿ ಬುತ್ತಿಯನ್ನು ರಾಜಭಾರಿ ಪಡ್ಡೆಲನ ಕೈಗೆ ಕೊಟ್ಟನು. ಅಷ್ಟರಲ್ಲಿ ಅಲ್ಲಿಗೆ ಅನಿರೀಕ್ಷಿತವಾಗಿ ಮಂಗರದರಸನ ಪ್ರವೇಶವಾಯಿತು. ಬುತ್ತಿಯನ್ನು ಆತ ನೋಡಿದನು. ಬುತ್ತಿಯ ಮಾಟ—ಅಂದಚಂದ—ಅವನ ಚಿತ್ತವನ್ನಪಹರಿಸಿತು. ಪಡ್ಡೆಲನಿಗೆ ಪ್ರಶ್ನಿಸಿದನು:

"ಇದು ಯಾರು ಕೊಟ್ಟುಕಳುಹಿಸಿದ ಬುತ್ತಿ?"

"ದೇಶಭಾರಿ ಬೀಡಿನಲ್ಲಿರುವ ನನ್ನ ತಂಗಿ—ತಂಗಡಿ ತಟ್ಟುಗ ಕಳುಹಿಸಿದ್ದು."

ಮಂಗರದ ಅರಸ ಬುತ್ತಿಯನ್ನು ಇದಿರಿಗೆ ಇಟ್ಟು ಅದರ ಒಂದು ಕೊಳಕೆ ತಪ್ಪಿಸಿದನು. ಒಂದು ಕೊಳಕೆ ತಪ್ಪಿಸಿದಾಗ ಸಾವಿರ ಕೊಳಕೆ ಸಿಕ್ಕೊಂಡವು. ತರುವಾಯ ರಾಜಭಾರಿ ಪಡ್ಡೆಲ ಕೈಯಿಕ್ಕಿ ಒಂದು ಕೊಳಕೆ ತಪ್ಪಿಸಿದಾಗ ಮಾತ್ರ ಸಾವಿರ ಕೊಳಕೆಗಳೂ ಕಳಚಿಕೊಂಡವು ಅದನ್ನು ಕಂಡು ಮಂಗರದರಸು ಗಂಭೀರವಾದ ಮುಖಭಂಗಿಯನ್ನು ವ್ಯಕ್ತಪಡಿಸುತ್ತ ಕ್ಷಣಕಾಲ ವಿಚಾರಕ್ಕೊಳಗಾದನು. ಬಳಿಕ ಸಾವರಿಸಿಕೊಂಡು ಪಡ್ಡೆಲನಿಗೆ ಹೀಗೆಂದನು:

"ಪಡ್ಡೆಲಾ, ನೀನು ಹಸಿವಿಗೆ ಉಣ್ಣು. ನಿನಗೊಂದು ಮಾತು ಹೇಳುವೆನು. ನಿನ್ನ ಊಟವಾದ ಬಳಿಕ ಬಂದು ಮಾತಾಡುತ್ತೇನೆ."

ಅಷ್ಟು ಹೇಳಿ ಮಂಗರದರಸ ಹೊರ ನಡೆದನು. ರಾಜಭಾರಿ ಪಡ್ಡೆಲ ಕೈಕಾಲು ಮುಖ ತೊಳೆದುಕೊಂಡು ಬಂದು ಬುತ್ತಿಯ ಅನ್ನವನ್ನುಂಡನು. ಸಾವಕಾಶವಾಗಿ ತಾಂಬೂಲ ಹಾಕುತ್ತಿರುವಷ್ಟರಲ್ಲಿ ಮಂಗರದರಸನ ಸವಾರಿ ಪುನರಾಗಮಿಸಿತು.

"ನಿನ್ನ ತಂಗಿಯನ್ನು ನನಗೆ ಕೊಡುವೆಯಾ, ಪಡ್ಡೆಲ?"

ಅದನ್ನು ಕೇಳಿ ಪಡ್ಡೆಲ ಮಿಂಚಿಹೊಡೆಯಲ್ಪಟ್ಟವನಂತಾಗಿ ಒಮ್ಮೆಲೇ ಮೆಟ್ಟಿಬಿದ್ದನು. ತಗ್ಗಿದ ಮೋರೆಯನ್ನು ಮೇಲಕ್ಕೆತ್ತಲಿಲ್ಲ.

"ಮೋರೆ ತಗ್ಗಿಸಬೇಡ. ತಲೆ ಎತ್ತಿ ನನಗೆ ಸಮ್ಮತಿ ಕೊಡು. ನಿನ್ನ ತಂಗಡಿ ತಟ್ಟುಗಳನ್ನು ನನಗೆ ಕೊಟ್ಟು ಧಾರೆ ಎರೆಯುವಿಯಾ?"—ಮಂಗರದರಸ ಆಗ್ರಹಹಿಡಿದು ಪುನಃ ಕೇಳಿದನು.

"ನೀವು ಯಾವುದೇ ಮಾತು ಹೇಳಿದರೂ, ಅದೊಂದನ್ನು ಮಾತ್ರ ಕೇಳಬೇಡಿರಿ"—ಪಡ್ಡೆಲ ಉತ್ತರಿಸಿದನು.

"ನಿನಗೆ ಕೊಡದ ಶಿಕ್ಷೆ ಕೊಡಿಸುತ್ತೇನೆ. ಬಾರದ ಬವಣೆ ಬರಿಸುತ್ತೇನೆ."—ಬಲವಂತಿಕೆ!

"ಯಾವ ಶಿಕ್ಷೆ ಕೊಟ್ಟರೂ ನಾನು ಅನುಭವಿಸುವೆನು. ನನ್ನ ತಂಗಿಯನ್ನು ಮಾತ್ರ ಕೊಡಲಿಕ್ಕಿಲ್ಲ."—ಖಚಿತೋಕ್ತಿ!

ಮಂಗರದರಸ "ಚಾವಡಿ ಮಕ್ಕಳಿಂ" (ಸೇವಕರು) ಅವರನ್ನು ಕರೆದು ಪಡ್ಡೆಲನ ಕೈಕಾಲುಗಳನ್ನು ಹಗ್ಗದಿಂದ ಬಿಗಿದು ಬಂಧಿಸಿದನು. ಅವನನ್ನು ಒದ್ದು ಗುದ್ದಿ ಹಾಕಿಸಿದನು.

"ಸಾಕೇ ಶಿಕ್ಷೆ? ಬಾಯಿ ತೆರೆದು ಹೇಳು. ಹೇಳದಿದ್ದರೆ........"—ಮಂಗರದರಸ ಗುರುಗುತ್ತ ಕಣ್ಣಾಲಿಗಳನ್ನು ತಿರುಗಿಸಿದನು.

"ಈ ಶಿಕ್ಷೆ ಬಿಟ್ಟು ಮೇಲಿನ ಶಿಕ್ಷೆ ಕೊಟ್ಟರೂ ನನ್ನ ತಂಗಿಯನ್ನು ಕೊಡಲಾರೆ."

ಅಷ್ಟು ಕೇಳಿ ಮಂಗರದರಸು ಸೇವಕರಿಂದ ಹುಣಸೆ ಬೋರಲನ್ನೂ, ಕೇಸಿರುವೆಗಳ ಹಿಂಡಲನ್ನೂ ತರಿಸಿದನು. ಮೆಣಸು ಅರೆಯಿಸಿದನು. ಪಡ್ಡೆಲನ ಎರಡು ಕಣ್ಣುಗಳಿಗೂ ಮೆಣಸಿನ ಮುದ್ದೆ ಸವರಿಸಿ, ಮೈಮೇಲೆ ಕೇಸಿರುವೆಗಳನ್ನು ಹರಿಸಿ ಹುಣಸೆ ಬೊರಲಿನಿಂದ ಕೈಬಚ್ಚುವಷ್ಟು ಹೊಡೆಸಿದನು.

"ಮಾತಾಡು. ಸಿಗದ ಶಿಕ್ಷೆ ನೀನು ಅನುಭವಿಸಿದಿ; ಹೇಳೀಗ ನಿನ್ನ ತಂಗಿಯನ್ನು ಕೊಡುವಿಯಾ? ನೆಂಟಸ್ತಿಕೆ ಹಿಡಿಯುವಿಯಾ?"

"ಇದುವೇ ಹಿಂಸೆಯಲ್ಲ; ಇವಕ್ಕಿಂತ ಮಿಗಿಲಾದ ಚಿತ್ರಹಿಂಸೆಯನ್ನು ಕೊಟ್ಟರೂ ನನ್ನ ತಂಗಿಯನ್ನು ಕೊಡಲಾರೆ, ನೆಂಟಸ್ತಿಕೆ ಹಿಡಿಯಲಾರೆ."

ಮಂಗರದರಸ ಸೇವಕರಿಗೆ ಆಜ್ಞಾಪಿಸಿದನು:

"ಏನು ನೋಡುತ್ತೀರಿ? ಈತನನ್ನು ದಿಂಡೆ ಸಂಕಲೆಯಲ್ಲಿ ಬಿಗಿದು ಮುಂಡುಮಾಳಿಗೆಯಲ್ಲಿ ಹಾಕಿ ದಿಗ್ಬಂಧನದಲ್ಲಿಡಿರಿ."

"ನಾನು ಬರುವಾಗ ನಡೆದುಕೊಂಡು ಬಂದೆನು. ಹಿಂತಿರುಗುವಾಗ ನನ್ನನ್ನು ಹೊತ್ತುಕೊಂಡು ಹೋಗುವಂತಾದರೂ ನನ್ನ ತಂಗಿಯನ್ನು ಕೊಡಲಿಕ್ಕಿಲ್ಲ."

ಸೇವಕರು ಪಡ್ಡೆಲನನ್ನು ಮುಂಡುಮಾಳಿಗೆಯ ಸೆರೆಮನೆಗೆ ಒಯ್ದು ಅವನನ್ನಲ್ಲಿ ದಿಂಡೆ ಸಂಕಲೆಯಲ್ಲಿ ದಿಗ್ಬಂಧನದಲ್ಲಿಟ್ಟರು.

ಆ ದಿನ ದಾಟಿತು. ಮರುದಿನ ಕಣ್ಣಿನಲ್ಲಿ ಕಣ್ಣೀರ ಕೋಡಿ ಹರಿಸುತ್ತ ರಾಜಭಾರಿ ಪಡ್ಡೆಲ ಸೆರೆಮನೆಯಲ್ಲಿ ಹಳವಿಸಿದನು, ಹಸಿವೆ ಆಸರಿಕೆಗಳಿಂದ ಬಾಯಾರಿ ಕಂಗೆಟ್ಟು ನರಳಾಡತೊಡಗಿದನು.

೦ ೦ ೦ ೦

—— [ಸಶೇಷ]

ಸದ್ದಿನ ಸುದ್ದಿಗಳು

[1ನೇ ಪುಟದಿಂದ ಮುಂದುವರಿದುದು]

ಸಚಿವ ನೆಹರುಗಳವರಿಂದ, ನವಂಬರದಲ್ಲಿ ನೆರವೇರಲಿದೆ. ಈ ಗುಡಿಯೊಳಗೆ ಅಂತರ ರಾಷ್ಟ್ರೀಯ ಗ್ರಂಥಾಲಯವೊಂದು ಮತ್ತು ವಿದೇಶಗಳಿಂದ ಬರುವ ವಿದ್ವಾಂಸರಿಗೆ ಉಳಕೊಳ್ಳಲು ಬಳಿಯಲ್ಲೆ ಒಂದು ವಸತಿ ಗೃಹವೂ ರಚಿಸಲ್ಪಡುವುವು.

ನೆತ್ತರುಕೊಟ್ಟು ವಿಮೋಚನೆ

ಮಹಾರಾಷ್ಟ್ರದಲ್ಲಿ ಒಬ್ಬ ಕೈದಿಯು, ರಾಜ್ಯದ ರಕ್ತನಿಧಿಗೆ ತನ್ನ ರಕ್ತವನ್ನು ದಾನಮಾಡಿದರೆ ಅಂಥವನಿಗೆ ಬಂಧೀವಾಸದ ಅವಧಿಯಲ್ಲಿ ಹತ್ತು ದಿನಗಳು ಮಾಫಿಮಾಡಲ್ಪಡುತ್ತವೆ. (ಇತರರು ರಕ್ತದಾನ ಮಾಡಿದರೆ ಐದು ರೂಪಾಯಿಗಳನ್ನು ಕೊಡಲಾಗುತ್ತಿದೆ.) ಕೆಲಕಾಲದ ಹಿಂದೆ, ಭಾರತ ಸರಕಾರದವರು ನೇಮಿಸಿದ ಒಂದು ಸಮಿತಿಯವರು, ಈ ವಿಷಯವನ್ನು ಪರಿಶೀಲಿಸಿ, ಕೈದಿಗಳಿಗೆ ಆ ರೀತಿ ರಿಯಾಯಿತಿ ತೋರಿಸುವುದರಿಂದ ಕೆಲವೊಂದು ನಿಬಂಧನೆಗಳಿಗೆ ಧಕ್ಕೆ ತಗಲುತ್ತದೆಂದು ಅಭಿಪ್ರಾಯಪಟ್ಟರು. ಆ ಕೂಡಲೇ, ಎಪ್ರಿಲ್ ತಾ. 1ರಿಂದ, ಮಹಾರಾಷ್ಟ್ರ ಸರಕಾರವು, ಕೈದಿಗಳಿಂದ ನೆತ್ತರು ಪಡೆವುದನ್ನು ನಿಲ್ಲಿಸಿಬಿಟ್ಟರು. ಕೈದಿಗಳ ರಕ್ತದಾನನಿಂತ ಕೂಡಲೇ ಆ ರಾಜ್ಯದ ಸರಕಾರೀ ಆಸ್ಪತ್ರೆಗಳ ರಕ್ತ ನಿಧಿಗಳು ಬತ್ತಿಹೋಗಲಾರಂಭಿಸಿದುವು. ಈಗ, ನಿಬಂಧನೆಗಳ ಸಾಧಕಬಾಧಕಗಳು ಸರಿಯಾಗಿ ನಿರ್ಣಯವಾಗುವ ತನಕ, ತಿರಿಗಿ ಕೈದಿಗಳಿಗೆ ನೆತ್ತರು ರಿಯಾಯಿತಿಯು ಆರಂಭಿಸಲ್ಪಟ್ಟಿದೆ.

ಕಾಲುವೆಗೆ ಕೀಳು ಸಿಮೆಂಟು

ರಾಜಸ್ಥಾನದ ನೀರಾವರಿ ಮತ್ತು ವಿದ್ಯುಚ್ಛಕ್ತಿ ಇಲಾಖೆಯ ಸಿಬ್ಬಂಧಿಯು ಮೇಲ್ವಿಚಾರದಲ್ಲಿ, ಫಿರೋಜಪುರ ಜಿಲ್ಲೆಯ ಮುಕ್ತಸ್ಸರ್ ಬಳಿ "ರಾಜಸ್ಥಾನ ಕಾಲುವೆ" ರಚಿಸಲ್ಪಡುತ್ತಿದೆ. ನೀರಾವರಿ ಇಲಾಖಾ ಉಪಮಂತ್ರಿ ಶ್ರೀ। ಹರಿಚರಣ ಸಿಂಘ ಬ್ರಾರವರು, ಕಳೆದ ವಾರ ಆ ಕಾಮಗಾರಿ ನಡೆವಲ್ಲಿಗೆ ಹೋಗಿ, ಉಪಯೋಗಿಸಲ್ಪಡುವ ಇಟ್ಟಿಂಗಿಗಳಲ್ಲಿ ಕೆಲವನ್ನೂ, ಸ್ವಲ್ಪ ಸಿಮೆಂಟನ್ನೂ ತೆಗೆದುಕೊಂಡು, ಚಂಡೀಗಢಕ್ಕೆ ಪರೀಕ್ಷೆಗೆ ತಂದರು. ಇಟ್ಟಿಂಗಿಗಳು ಪೂರ್ಣ ಬೇಯದೆ ಇದ್ದು, ಸಿಮೆಂಟು ಹೊಯ್ಗೆಯ ಮಿಶ್ರಣವುಳ್ಳದ್ದು ಎಂದು ಕಂಡುಬಂದಿದೆ. ಕಾಲುವೆಗಳನ್ನು ರಚಿಸುವುದು ಸಂಪತ್ತಿಗಾಗಿ. ಕೀಳ್ತರಗತಿಯ ಸಿಮೆಂಟ್ ಮತ್ತು ಅರೆಬೆಂದ ಇಟ್ಟಿಂಗಿಗಳಿಂದ ಕಟ್ಟಿದ ಕಾಲುವೆಯು ವಿಪತ್ತಿಗಾಗಿ ಮಾತ್ರ. ನವಭಾರತ ನಿರ್ಮಾಣದಲ್ಲಿ ನಗದಿ ನಾರಾಯಣರು!

"ನೆಹರುಗಳಿಗೆ ಹೆಚ್ಚು ವಿಶ್ರಾಂತಿ ಕೊಡಿರಿ"

"ಪಂಡಿತ ನೆಹರುಗಳವರು ದಿನಕ್ಕೆ ಎಂಟು ಗಂಟೆಗಿಂತ ಹೆಚ್ಚು ಕೆಲಸ ಮಾಡಬಾರದು. ಅವರ ಸಹೋದ್ಯೋಗಿಗಳು ಹೆಚ್ಚು ಕಾರ್ಯಭಾರವನ್ನು ಪಡೆದು ನೆಹರುಗಳವರಿಗೆ ಹೆಚ್ಚು ವಿಶ್ರಾಂತಿ ಕೊಡಬೇಕು—"

—ಎಂದು, ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಡಾ। ಬಿ. ಸಿ. ರೋಯ್‌ರವರು ತಮ್ಮ ಕೊನೆಯದೊಂದು ಆಸೆಯನ್ನು ವ್ಯಕ್ತಪಡಿಸಿದರು ಎಂಬುದಾಗಿ, ಭಾರತ ಸರಕಾರದ ಕೈಗಾರಿಕಾ ಮಂತ್ರಿ ಶ್ರೀ। ಸಿ. ಸುಬ್ರಹ್ಮಣ್ಯಂರವರು, ಮದರಾಸಿನಲ್ಲಿ ಮೊನ್ನೆ ಬಹಿರಂಗಪಡಿಸಿದರು. ಶ್ರೀ। ಸಿ. ಸುಬ್ರಹ್ಮಣ್ಯಂರವರು, ಡಾ। ರೋಯ್‌ರವರ ನಿಧನದ ಮುಂಚಿನ ದಿನ ಅವರಲ್ಲಿಗೆ ತೆರಳಿ ಅರ್ಧಗಂಟೆಯ ಕಾಲ ಅವರೊಡನೆ ಇದ್ದರು.

—o—

ದಾವಿದ ಮತ್ತು ಗೊಲ್ಯೆತ್

ಬೈಬಲಿನ ಅತ್ಯುಜ್ವಲ ಕಥೆಗಳಲ್ಲೊಂದು

ದೇವರ ಮೇಲಿನ ಅಚಲವಿಶ್ವಾಸದಿಂದ, ಸಾಮಾನ್ಯ ಮಾನವನೊಬ್ಬನು, ರಾಕ್ಷಸಾಕಾರದ ಗೊಲ್ಯೆತನನ್ನು ಸದೆಬಡಿದನು. ಈ ಉಜ್ವಲ ಕಥೆಯು ("ದಾವಿದನೂ ಗೊಲ್ಯೆತನೂ") ಸ್ಥಳೀಯ ಬಾಲಾಜಿ ಟೊಕಿಸಿನಲ್ಲಿ, ಇದೇ ತಾ. 6ರಿಂದ ಕಿಕ್ಕಿರಿದ ಜನಸಂದಣಿಗೆ ಪ್ರದರ್ಶಿಸಲ್ಪಡುತ್ತಿದೆ.

ಕಥಾಸಾರಾಂಶವು ಹೀಗಿದೆ: ಇಸ್ರಾಯೇಲಿನ ಅರಸು ಸೌಲನು ಒಮ್ಮೆ ನ್ಯಾಯವಾದಿಯೂ, ದಯಾಳುವೂ ಆಗಿದ್ದವನು, ಕ್ರಮೇಣ ಕ್ರೂರತನದಿಂದ ನಿರಂಕುಶ ಪ್ರಭುವಾಗಿ ಆಳತೊಡಗಿದನು. ಸೌಲನ ಆ ಸ್ಥಾನಕ್ಕೆ ಪ್ರವಾದಿ ಸೆಮುವೇಲನು ಒಮ್ಮೆ ಬಂದಾಗ, ನಿರಂಕುಶ ಪ್ರಭುತ್ವಕ್ಕಾಗಿ ಅರಸನನ್ನು ಎಚ್ಚರಿಸಿ, ಮಹಾಮೇಧಾವಿಯೂ ಸಹೃದಯನೂ ಆದವನೊಬ್ಬನು ಈ ರಾಜ್ಯವನ್ನಾಳಲು ಬರುವವನಿರುವನು ಎಂದೂ ಪ್ರವಾದ ಹೇಳಿದನು.

ಬೆತ್ಲೆಹೆಮಿನ ಜೂದನ ಮನೆತನದ ಜೆಸ್ಸೆ ಎಂಬಾತನಿಗೆ ಎಂಟು ಮಕ್ಕಳು. ಅವರಲ್ಲಿ ಕೊನೆಯವನು ದಾವಿದ. ಈ ಬಾಲಕನು ಅಪ್ರತಿಮ ಬುದ್ಧಿಶಕ್ತಿಯಿಂದಲೂ ದಯಾದಸ್ರ ಹೃದಯದಿಂದಲೂ ಕೂಡಿದವನಾಗಿ, ಬಹುಜನರ ಮೆಚ್ಚುಗೆ ಪಡೆದು ಬೆಳೆಯುತಿದ್ದನು. ಇವನನ್ನೇ ಸೆಮುವೇಲನು ಇಸ್ರಾಯೇಲದ ಮುಂದಿನ ಅರಸಾಗಿ ಆರಿಸಿದ್ದನು.

ದಾವಿದನನ್ನು ಕರೆಸಿ ನೇಮಿಸುವಂತೆ ಸೆಮುವೇಲನು ಅರಸು ಸೌಲನಿಗೆ ಉಪದೇಶಿಸಿದನು. ಬೆತ್ಲೆಹೆಮಿನಿಂದ ದಾವಿದನನ್ನು ಕರೆಸಿದರು. ಅರಸು ಅವನಿಗೆ ಕೆಲಸಕೊಟ್ಟನು. ರಾಜಕುಮಾರಿ ಮಾಯ್ಕಲಳು ದಾವಿದನ ಮೇಲೆ ಅನುರಾಗಹೊಂದಿದಳು. ರಾಜಕುಮಾರ ಜೋನಾಥನನು ದಾವಿದನ ಪರಮ ಸ್ನೇಹಿತನಾದನು.

ಆಗ, ಇಸ್ರಯೇಲ್ ಮತ್ತು ಫಿಲಿಸ್ತಾನೀಗಳೊಳಗೆ ಯುದ್ಧ ನಡೆದಿತ್ತು. ಫಿಲಿಸ್ತ್ಯನ್ ಸೇನೆಗಳ ನಾಯಕನಾಗಿ, ರಾಕ್ಷಸಬಲದ ಗೊಲ್ಯೆತನು ಇದ್ದು, ಇವನೊಬ್ಬನೇ ಒಂದು ಹೊಡೆದಾಟದಲ್ಲಿ ನೂರಾರು ಜನರನ್ನು ಕೊಂದುಹಾಕುವಷ್ಟು ಅರಿಭಯಂಕರನಾಗಿದ್ದನು. ಸೌಲನ ಪ್ರಧಾನ ಅಬ್ನರ್ ಎಂಬಾತನು ಹಿರಿಯ ರಾಜಕುಮಾರಿ ಮೆರಾಬಳನ್ನು ಪ್ರೀತಿಸುತಿದ್ದು, ದಾವಿದನ ವರ್ಚಸ್ಸು ಬೆಳೆಯುತಿದ್ದುದನ್ನು ಕಂಡು ಮತ್ಸರಪಟ್ಟು, ಅವನನ್ನು ಕೊನೆಗೊಳಿಸಬೇಕೆಂದು ಬಗೆದು, ಫಿಲಿಸ್ತ್ಯನಿರೊಡನೆ ಯುದ್ಧವಿರಾಮವನ್ನು ನಿರ್ಣಯಿಸುವಂತೆ ದಾವಿದನನ್ನು ದೂತನಾಗಿ ಕಳುಹುವಂತೆ ಅರಸನಿಗೆ ಬೋಧಿಸಿದನು. ಈ ಮೊದಲು ಹಾಗೆ ಹೋದವರನ್ನೆಲ್ಲಾ ಗೊಲ್ಯೆತನು ಮುಗಿಸಿಬಿಟ್ಟಿದ್ದನು. ದಾವಿದನು ಅರಸನ ಅಪ್ಪಣೆಪಡೆದು ಹೋಗುತ್ತ, ಅಲ್ಲಲ್ಲಿ ಗೊಲ್ಯೆತನ ಭಯದಿಂದ ಕಂಗಾಲಾಗಿ ಪಲಾಯನಮಾಡುತ್ತಿರುವ — ಸಂಕಷ್ಟಪಡುವ — ಜನರನ್ನು ಕಂಡು ಮನಕರಗಿದನು. ಮುಂದರಿಯುತ್ತ, ಅಸ್ರೋಡಿಗೆ ತೆರಳಿ, ಫಿಲಿಸ್ತ್ಯನದ ಅರಸನನ್ನು ಎದುರಾದನು. ದಾವಿದನ ಎದೆಗಾರಿಕೆಯಿಂದ ಚಕಿತನಾದ ಫಿಲಿಸ್ತ್ಯನ್ ಅರಸು, ಅವನಿಗೆ ಈ ರೀತಿ ಪಂಥಾಹ್ವಾನವಿತ್ತನು: "ನೀನು ಗೊಲ್ಯೆತನೊಡನೆ ಯುದ್ಧಮಾಡಿ ಗೆದ್ದರೆ, ನಾನು ಜೆರುಸಲೇಮನ್ನು ಹಾನಿಗೊಳಿಸದೆ, ನನ್ನ ಸೇನೆಗಳ ಸಹಿತ ಹಿಂದಿರುಗುವೆನು."

ದಾವಿದನು ಒಪ್ಪಿದನು. ದೇವರಲ್ಲಿ ಅಚಲ ವಿಶ್ವಾಸವಿರಿಸಿ, ರಾಕ್ಷಸಾಕಾರದ ಗೊಲ್ಯೆತನನ್ನು ಎದುರಾದನು. ಗೊಲ್ಯೆತನು ಈ "ಚಿಕ್ಕ ಪೋರ"ನನ್ನು ಕಂಡು ವಿನೋದದಿಂದ ನಗುತ್ತ, ಒಂದೇಟಿನಲ್ಲಿ ದಾವಿದನನ್ನು ಕೊನೆಗೊಳಿಸಲು ಮುಂದಾದನು. ಆದರೆ, ದಾವಿದನು ಅದಕ್ಕೀಡಾಗಲಿಲ್ಲ. ರೋಷೋನ್ಮತ್ತಗೊಂಡು ಗೊಲ್ಯೆತನು ತನ್ನ ಪೂರ್ಣ ಶಕ್ತಿಯನ್ನೂ ಪ್ರಯೋಗಿಸಲು ತೊಡಗಿದನು. ರೋಮಾಂಚಕ ಕಾಳಗ ನಡೆದು, ಅಜೇಯನೆನಿಸಿದ್ದ ಗೊಲ್ಯೆತನು ಬಿದ್ದನು. ಗೊಲ್ಯೆತನ ಖಡ್ಗವನ್ನು ಸೆಳೆದೇ ದಾವಿದನು ಅವನನ್ನು ಕೊಂದುಹಾಕಿದನು.

ಈ ವಿಜಯವು ಸಮಸ್ತ ಜನತೆಗೆ ಆನಂದಾಶ್ಚರ್ಯಗಳನ್ನು ತಂದಿತು. ವಿಜಯೀ ದಾವಿದನನ್ನು ಸೌಲನ ಪ್ರಧಾನ ಸಚಿವ ಅಬ್ನರನು ಮೋಸದಿಂದ ಕಡಿದುಹಾಕಲು ಮುಂದಾದನು. ಅರಸನೇ ಈ ಅನಾಹುತವನ್ನು ತಡೆದು ಅಬ್ನರನನ್ನು ಕೊಂದನು. ಸೆಮುವೇಲನ ಪ್ರವಾದವು ನಿಜವಾಗುವ ಕಾಲ ಬಂತು. ಅರಸು ಸೌಲನು ತನ್ನ ಪುತ್ರಿ ಮ್ಯಾಕಲಳನ್ನು ದಾವಿದನಿಗೊಪ್ಪಿಸಿದನು.

ಈಸ್ಟ್‌ಮನ್ ಕಲರಿನಲ್ಲಿ ಮತ್ತು ಟೋಟಲ್‌ಸ್ಕೋಪಿನಲ್ಲಿ ಇರುವ ಈ ಚಿತ್ರವು, ಎರಡು ಸಾವಿರ ವರ್ಷಗಳ ಹಿಂದಣ ಜೆರುಸಲೇಮಿನ ವೈಭವ, ಪೋಷಾಕುಗಳು, ನಡತೆ, ಶೌರ್ಯ, ವಿಶ್ವಾಸ, ಪ್ರೇಮ — ಇವೆಲ್ಲವನ್ನೂ ವ್ಯಯ ಮತ್ತು ಶ್ರಮಗಳನ್ನು ಗಣಿಸದೆ, ನೈಜವೈಭವೋಪೇತವಾಗಿ ಉತ್ತಮವಾಗಿ ಪ್ರದರ್ಶಿಸುತ್ತಿದೆ. ಓರ್ಸನ್ ವೆಲ್ಲೆಸ್ ಅರಸು ಸೌಲನಾಗಿ, ಐವೋ ಪೆಯರ್ ದಾವಿದನಾಗಿ, ಕ್ರೊನೊಸ್ ಗೊಲ್ಯೆತನಾಗಿ, ಜಿಯುಲಿಯಾ ರುಬಿನಿ ಮ್ಯಾಕಲಳಾಗಿ ಅಭಿನಯಿಸುತ್ತಾರೆ. ರೋಮ್ ಮತ್ತು ಜೆರುಸಲೇಮ್‌ಗಳಲ್ಲಿ ಚಿತ್ರವೆತ್ತಲ್ಪಟ್ಟಿದೆ—ಚಿತ್ರಪ್ರೇಮಿಗಳು ಅವಶ್ಯವಾಗಿ ಈ ಚಿತ್ರವನ್ನು ನೋಡಬೇಕು.

— —

ಶ್ರೀ ವಿದ್ಯಾರಣ್ಯ ವಿರಚಿತ

ಸಂಕ್ಷಿಪ್ತ ಶ್ರೀ ಶಂಕರ ವಿಜಯ

(ಶ್ರೀ ಕೋ. ಶ. ಕಾರಂತ, ಬಿ.ಎ.,ಬಿ.ಎಲ್., ಎಡ್ವೊಕೇಟ್, ಮಂಗಳೂರು-3)

(ಕಳೆದ ಸಂಚಿಕೆಯಿಂದ ಮುಂದುವರಿದುದು)

111. ತತ್ರಾತುರಾಂ
ಮಾತರಮೈಕ್ಷತಾಸೌ
ನನಾಮ ತಸ್ಯಾಶ್ಚರಣೌ
ಕೃತಾತ್ಮಾ ।
ಅಂಬಾಯಮಸ್ತ್ಯತ್ರ ಶುಚಂ
ಜಹೀಹಿ
ಬ್ರವೀಹಿ ಕಿಂತೇ
ಕರವಾಣಿ ಕೃತ್ಯಮ್ ॥

ಆ ಕಾಲಟಿಯಲ್ಲಿ ಮರಣೋನ್ಮುಖಳಾಗಿದ್ದ ಮಾತೆಯನ್ನು ನೋಡಿದನು. ಆತ್ಮಜ್ಞಾನಿಯಾದ ಮಗನು ಆಕೆಯ ಪಾದಗಳನ್ನು ಹಿಡಿದು ನಮಸ್ಕಾರ ಮಾಡಿದನು. "ಹೇ ಅಮ್ಮಾ! ಈ ಮಗನು ನಿನ್ನ ಬಳಿ ನಮಸ್ಕರಿಸುತ್ತಿದ್ದಾನೆ. ಶೋಕವನ್ನೆಲ್ಲಾ ತ್ಯಜಿಸಿಬಿಡಮ್ಮಾ. ನಿನ್ನ ಕೋರಿಕೆಗಳೇನಿದ್ದರೂ ಹೇಳಮ್ಮಾ, ನಾನು ಮಾಡುತ್ತೇನೆ. ಚಿಂತಿಸಬೇಡ" ಎಂದು ಪ್ರಿಯ ವಚನವನ್ನಾಡಿದನು.

112. ಇತಃ ಪರಂ
ಪುತ್ರಕಗಾತ್ರಮೇತ
ದ್ವೋಢುಂ ನಶಕ್ನೋಮಿ ಜ
ರಾತಿಶೀರ್ಣಮ್ ।
ಸಂಸ್ಕೃತ್ಯ
ಶಾಸ್ತ್ರೋದಿತವರ್ತ್ಮನಾತ್ವಂ
ಸದ್ವೃತ್ತಮಾಂ ಪ್ರಾಪಯ
ಪುಣ್ಯಲೋಕಾನ್ ॥

"ಸದಾಚಾರ ಸಂಪನ್ನನಾದ ಮಗನೇ! ಮುಪ್ಪಿನಿಂದ ಬಹಳ ಜೀರ್ಣವಾದ ಈ ಶರೀರವನ್ನು ಇನ್ನು ಧರಿಸುವುದಕ್ಕೆ ನನ್ನಿಂದ ಅಸಾಧ್ಯವಾಗಿದೆ. ಆದ್ದರಿಂದ ನೀನು ಶಾಸ್ತ್ರೋಕ್ತ ಪ್ರಕಾರ ಸಂಸ್ಕಾರವನ್ನು ಮಾಡಿ, ನನ್ನನ್ನು ಪುಣ್ಯಲೋಕಕ್ಕೆ ಮುಟ್ಟಿಸು, ಮಗನೆ" ಎಂದು ಆರ್ಯಾಂಬೆ ನುಡಿದಳು.

113. ಸ್ವಯಮೇವ
ಚಿಕೀರ್ಷುರೇಷನಾತಂ
ಶ್ಚರಮಂ ಕರ್ಮ
ಸಮಾಜುಹಾವ ಬಂಧೂನ್ ।
ಕಿ ಮಿಹಾಸ್ತಿ ಯತೇ
ಸ್ತವಾಧಿಕಾರಃ
ಕಿ ತವೇತ್ಯೇನಮಮೀ
ನಿನಿಂದುರುಚ್ಚೈಃ ॥

ಮಾತೆಯ ಅಂತ್ಯೇಷ್ಟಿಯ ದಹನಾದಿ ಕರ್ಮಗಳನ್ನು ತಾನೇ ಮಾಡಬೇಕೆಂದು ಶಂಕರಾಚಾರ್ಯನು ಬಂಧುಗಳನ್ನು ಕರೆದನು. ಅವರು ಸಂನ್ಯಾಸಿಯಾದ ನಿನಗೆ ತಾಯಿಯ ಸಂಸ್ಕಾರವನ್ನು ಮಾಡಲಿಕ್ಕೆ ಎಲ್ಲಿಯ ಅಧಿಕಾರವಿದೆ? ವಂಚನೆ ಎಂದು ಗಟ್ಟಿಯಾಗಿ ನಿಂದಿಸಿದರು.

114 ಅನಲಂ
ಬಹುಧಾರ್ಥಿತಾಪಿತಸ್ಮೈ
ಬತನಾದದತ್ತ ಚ
ಬಂಧುತಾ ತದೀಯಾ ।
ಸಂಚಿತ್ಯಕಾಷ್ಠಾನಿ
ಸುಶುಷ್ಕವಂತಿ
ಗೃಹೋಪಕಂಠೇ
ಧೃತತೋಯಪಾತ್ರಃ ।
ಸ ದಕ್ಷಿಣೇದೋಷ್ಣಿ
ಮಮಂಥವಹ್ನಿಂ
ದದಾಹತಾಂ ತೇನ ಚ
ಸಂಯತಾತ್ಮಾ

ಬಹುವಿಧದಿಂದ ಪ್ರಾರ್ಥಿಸಿದರೂ ಆ ಬಂಧುಜನರು ಬೆಂಕಿಯನ್ನು ಕೂಡ ಕೊಡಲಿಲ್ಲ. ಮನೆಯ ಮುಂದಿನ ಅಂಗಳದಲ್ಲಿಯೇ ಒಬ್ಬನೆ ಕಟ್ಟಿಗೆಯನ್ನು ಸಂಗ್ರಹಿಸಿ ಚಿತೆಯನ್ನು ಮಾಡಿದನು. ಜಲಪಾತ್ರೆಯನ್ನು ಎಡಗೈಯಲ್ಲಿ ಹಿಡಿದು, ಬಲಗೈಯಿಂದ ಅಗ್ನಿಮಥನಮಾಡಿ ಪರಿಶುದ್ಧಾತ್ಮ ಶಂಕರನು ತಾಯಿಯ ದಹನಾದಿಗಳನ್ನು ಮಾಡಿದನು.

115. ಅಥಶಿಷ್ಯೈರ್ವರ್ಯೈರ್ಯುತಸ್ಸಹಸ್ರೈ
ರನುಯಾತಸ್ಸುಧನ್ವನಾ
ಚ ರಾಜ್ಞಾ ।
ಕಕುಭೋ
ವಿಜಿಗೀಷುರೇಷಸರ್ವಾ
ಪ್ರಥಮಂ
ಸೇತುರುದಾರಧೀಃ ಪ್ರತಸ್ಥೇ

ಆ ತರುವಾಯ ಅನೇಕ ಶಿಷ್ಯರೊಡಗೂಡಿ, ಸುಧನ್ವನೆಂಬ ರಾಜನ ಬೆಂಬಲದಿಂದ ಸಮಸ್ತ ದಿಗ್ದೇಶಗಳನ್ನು ದಿಗ್ವಿಜಯ ಮಾಡಬೇಕೆಂದು ಮೊದಲು ರಾಮೇಶ್ವರದ ಕುರಿತು ವಿಜಯ ಯಾತ್ರೆಯನ್ನು ಮಾಡಿದರು.

116 ಕದಾಚಿದ್ಯಾಯನ್ ಗಂಗಾ
ಪೂರ ಸಂಗಾದ್ರ್ಯವಾತೈಃ ।
ಆಗಚ್ಛಂತಂ ಸೈಕತೇ
ಪ್ರತ್ಯಗಚ್ಛ
ದ್ಯೋಗೀಶಾನಂ
ಗೌಡಪಾದಾಭಿಧಾನಮ್ ॥

ಒಂದಾನೊಂದು ದಿನ ಸಾಯಂಕಾಲದಲ್ಲಿ, ಗಂಗಾಪ್ರವಾಹದ ಮೇಲಿಂದ ತಂಗಾಳಿಯು ಬೀಸುತ್ತಿರುವಾಗ, ಶಂಕರನು ಗೌಡಪಾದ ಮುನಿವರ್ಯನನ್ನು ನೋಡಿ ಸನ್ಮಾನಿಸಿದನು.

117. ಸೋಽಶ್ರಾವಯದ್
ಭಾಷ್ಯಮಶೇಷಮಸ್ಮೈ ।
ವಿಶಿಷ್ಯ ಮಾಂಡೂಕ್ಯಗ
ಭಾಷ್ಯಯುಗ್ಮಂ
ಶ್ರುತ್ವಾ ಪ್ರಹೃಷ್ಯನ್ನಿದಮ
ಪ್ರಿವೀತ್ತಮ್

ಶಂಕರನು ತನ್ನ ಭಾಷ್ಯೆಯನ್ನು ಸಂಪೂರ್ಣವಾಗಿ ಓದಿ ಹೇಳಿದನು. ವಿಶೇಷವಾಗಿರುವ ಮಾಂಡೂಕ್ಯ ಭಾಷೆಯನ್ನು ಮಾಂಡುಕ್ಯದ ಮೇಲೆ ಗೌಡಪಾದರು ಬರೆದ ಕಾರಿಕೆಗಳ ಮೇಲಿನ ಭಾಷ್ಯೆಯನ್ನು ಪೂರ್ಣ ಕೇಳಿ ಪ್ರಸನ್ನನಾಗಿ ಶಂಕರನ ಕುರಿತು ಹೀಗೆಂದರು:

118. ಮತಾರಿಕಾಭಾವ
ವಿಭೇದಿತಾದೃಜ್
ಮಾಂಡೂಕ್ಯ ಭಾಷ್ಯ
ಶ್ರವಣೋತ್ಥ ಹರ್ಷಃ ।
ದಾತುಂ ಪರಂ ತೇ
ವಿದುಷಾಂ ವರಾಯ
ಪ್ರೋತ್ಸಾಹಮುತ್ಯಾಕು
ವರಂ ವೃಣೀಷ್ವ ॥

"ನಾನು ರಚಿಸಿರುವ ಕಾರಿಕೆಗಳ ಭಾವವನ್ನು ಸ್ಪಷ್ಟಪಡಿಸಿರುವ ನಿನ್ನ ಭಾಷ್ಯೆಯನ್ನು ಶ್ರವಣಮಾಡಿ ಉಂಟಾದ ಸಂತೋಷವು ವಿದ್ವಾಂಸರಲ್ಲಿ ಶ್ರೇಷ್ಠನಾದ ನಿನಗೆ ಇಷ್ಟಾರ್ಥವನ್ನು ಅನುಗ್ರಹಿಸಬೇಕೆಂದು ನನ್ನನ್ನು ಪ್ರೇರೇಪಿಸಿರುತ್ತದೆ. ಆದ್ದರಿಂದ ಬೇಗನೆ ವರವನ್ನು ಕೇಳು."

119. ಸ ಪ್ರಾಹ ಪರ್ಯಾಯ
ಶುಕರ್ಷಿವೀಕ್ಷ್ಯ
ಭವಂತ ಮದ್ರಾಕ್ಷಮತಿಷ್ವ
ಪೂರುಷಮ್ ।
ವರಃ ವರಃ ಕೋಽಸ್ತಿ
ತಥಾಽಪಿ ಚಿಂತನಂ
ಚಿತ್ತತ್ವಗಂ ಮೇಽಸ್ತು
ತಥಾಽಪಿ ನಿರಂತರಮ್ ॥

ಪರ್ಯಾಯದಿಂದ ಶುಕ ಮಹರ್ಷಿಗೆ ಸಮಾನನಾದ ಗುರುಶ್ರೇಷ್ಠನೇ! ಈಗ ಸುಕೃತ ವಿಶೇಷದಿಂದ ನಿನ್ನ ದರ್ಶನ ಪ್ರಸಾದಗಿಂತ ಹೆಚ್ಚಾದ ವರವು ಯಾವುದಿದೆ? ಆದರೂ ನನ್ನ ಚಿಂತನೆಯು, ಧ್ಯಾನವು ನಿರಂತರವೂ ಚೈತನ್ಯದಲ್ಲಿ ಇರಲಿ ಎಂದು ವರವನ್ನು ಅನುಗ್ರಹಿಸಿ ಎಂದು ಕೇಳಿದನು.

—೦—